ಪಿಡಬ್ಲ್ಯೂ1 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ದಿಃ 06-01-2024**

<u>ಪಾಟೀ ಸವಾಲು</u> ಃ 1 ನೇ ಪ್ರತಿವಾದಿ ಪರಃ ಶ್ರೀ ಐ ಆರ್ ಬಿ ವಕೀಲರಿಂದಃ

ರಾಜೀವ ಶೆಟ್ಟಿ ಎಂದರೆ ನನ್ನ ತಂದೆ. ವಿಠಲ ಶೆಟ್ಟಿ ನನ್ನ ಅಜ್ಜ. ಆಸ್ತಿ ಖರೀದಿಸಿದ್ದಾರೆ ಎಂದು ಹೇಳುವ ಪೂರ್ವದಲ್ಲಿ ರಾಜೀವ ಶೆಟ್ಟಿ ವಿಠಲ ಶೆಟ್ಟಿ ಸುಮತಿ ಶೆಟ್ಟಿಯವರು ಬೆಳಂಜೆ ಗ್ರಾಮದಲ್ಲಿ ವಾಸ ಇದ್ದರು. ನವೆಂಬರ್ 1982 ರಲ್ಲಿ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತೇವೆ. ಅದರ ಮೂಲ ಕ್ರಯ ಪತ್ರ ನಮ್ಮ ಬಳಿ ಇದೆ. ಸದರಿ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಮಾಡದೇ ಇರಲು ಏನು ಕಾರಣ ಎಂದರೆ ಸಾಕ್ಷಿಯು ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದರ ಮೂಲ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ವಾಪ್ಪಸ್ಸು ಪಡೆದುಕೊಂಡಿರುತ್ತೇನೆ. ನಾನು ಮೇಲೆ ಹೇಳಿದ ಮೂಲ ಕ್ರಯಪತ್ರ ಎಂದರೆ ನಿಪಿ-23 ಆಗಿರುತ್ತದೆ. ನಿಪಿ-23 ರಲ್ಲಿ ಶಕುಂತಲಾ ಆರ್ ಶೆಟ್ಟಿಯವರ ಸಹಿ ಕಂಡು ಬರುವುದಿಲ್ಲ ಎಂದರೆ ಸರಿ. ಅಲ್ಲದೇ ನಿಪಿ-23 ರಲ್ಲಿ ರಾಜೀವ ಶೆಟ್ಟಿ ವಿಠಲ ಶೆಟ್ಟಿ ಸುಮತಿ ಶೆಟ್ಟಿಯವರ ಸಹಿಗಳು ಕೂಡ ಇರುವುದಿಲ್ಲ ಎಂದರೆ ಸರಿ. ಅದೇ ರೀತಿ ನಿಪಿ-23 ಕ್ಕೆ ಯಾರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂಬ ಬಗ್ಗೆ ಸಾಕ್ಷಿದಾರರ ಸಹಿಗಳು ಕಂಡು ಬರುವುದಿಲ್ಲ ಹಾಗೂ ನಿಪಿ-23 ದಸ್ತವೇಜಿನ ಬರಹಗಾರರ ಸಹಿ ಕೂಡ ಕಂಡು ಬರುವುದಿಲ್ಲ. ನಿಪಿ-23 ರಲ್ಲಿ ಸಬ್ ರಿಜಿಸ್ಟರ್ ರವರ ಸಹಿ ಕಂಡು ಬರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಮೂಲ ಕ್ರಯ ಪತ್ರದಲ್ಲಿ ಇದೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ನಿಪಿ-23 ದೃಢೀಕೃತ ಪ್ರತಿ ಎಂದು ನುಡಿಯುತ್ತಾರೆ. ಮುಂದಿನ ವಾಯಿದೆಗೆ ನಿಪಿ-23 ರ ಮೂಲ ಪ್ರತಿಯನ್ನು ನ್ಯಾಯಲಯಕ್ಕೆ ಹಾಜರುಪಡಿಸುತ್ತೇನೆ.

ಮುಂದುವರಿದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ